# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 176 |
| ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನ ಪ್ರಸಿದ್ಧ ಅಂಬಾದೇವಿ ಮಠದ ಅಭಿವೃದ್ಧಿಗೆ ಹೊಸ ಕಟ್ಟಡ ನಿರ್ಮಾಣ ಸೇರಿದಂತೆ ಸರ್ಕಾರದಿಂದ ಈಗಾಗಲೇ ಎಷ್ಟು ಹಣ ಮಂಜೂರಾಗಿದೆ; | ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕಿನ ಅಂಬಾದೇವಿ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಪ್ರವರ್ಗ 'ಎ' ಅಧಿಸೂಚಿತ ದೇವಾಲಯವಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಕಂಇ 7 ಮುಲಕಾ 2021, ದಿನಾಂಕ:08.11.2021ರಂತೆ ಶ್ರೀ ಅಂಬಾದೇವಿ ದೇವಾಲಯದ ಗರ್ಭಗುಡಿಯ ಹೊರ ಪ್ರಾಂಗಣದ ಸುತ್ತಲೂ ಹೊಸದಾಗಿ ಕಲ್ಲಿನ ಶಿಲಾ ಮಂಟಪ ನಿರ್ಮಿಸಲು ರೂ.7.93 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯನ್ನು ದೇವಾಲಯದ ನಿಧಿಯಿಂದ ಮತ್ತು ಸಾರ್ವಜನಿಕ ವಂತಿಕೆಯಿಂದ ಭರಿಸಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಆ) | ಕಳೆದ 50 ವರ್ಷಗಳಲ್ಲಿ ಸದರಿ ದೇವಸ್ಥಾನಕ್ಕೆ ಬಂದಿರುವ ಆದಾಯವೆಷ್ಟು; | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯು ದಿನಾಂಕ:01.05.2003 ರಂದು ಜಾರಿಗೆ ಬಂದಿರುತ್ತದೆ.<br><br>ಸದರಿ ಕಾಯ್ದೆಯು ಜಾರಿಗೆ ಬಂದ ಅವಧಿಯಿಂದ ಅಂದರೆ 2003-04 ರಿಂದ 2024-25ರ ಅವಧಿಯವರೆಗೆ ದೇವಾಲಯಕ್ಕೆ ರೂ.18,74,76,466/-ಗಳ (ಹದಿನೆಂಟು ಕೋಟಿ ಎಪ್ಪತ್ನಾಲ್ಕು ಲಕ್ಷದ ಎಪ್ಪತ್ತಾರು ಸಾವಿರದ ನಾಲ್ಕು ನೂರ ಅರವತ್ತಾರು ರೂಪಾಯಿಗಳು ಮಾತ್ರ) ಆದಾಯ ಬಂದಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಸದರಿ ಆದಾಯವನ್ನು ಯಾವ ಕಾರ್ಯಗಳಿಗಾಗಿ ವಿನಿಯೋಗ ಮಾಡಲಾಗಿದೆ; (ಪೂರ್ಣ ವಿವರ ನೀಡುವುದು); | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದನ್ವಯ ದೇವಾಲಯದ ಅರ್ಚಕರ ವೇತನ, ದೇವಸ್ಥಾನಗಳ ನಿರ್ಮಾಣ/ ನಿರ್ವಹಣೆ ವೆಚ್ಚ ಹಾಗೂ ಇತ್ಯಾದಿ ವೆಚ್ಚಗಳನ್ನು ನಿರ್ವಹಿಸಲಾಗುತ್ತದೆ.<br><br>ಮುಂದುವರೆದು, ಸದರಿ ದೇವಾಲಯಕ್ಕೆ ಬಂದಿರುವ ಆದಾಯವನ್ನು ಜಾತ್ರಾ ಖರ್ಚು, ಸುಣ್ಣ-ಬಣ್ಣ, ಸಣ್ಣ ಪುಟ್ಟ ಕೆಲಸಗಳು, ದಸರಾ, ಕಾರ್ತಿಕಮಾಸ, ಶ್ರಾವಣ ಮಾಸ, ದೈನಂದಿನ ಕೆಲಸಗಳಿಗೆ ಹಾಗೂ ಜಾತ್ರಾ ಸಮಯದಲ್ಲಿ ಬಂದಿರುವ ಭಕ್ತಾದಿಗಳಿಗೆ ಅನುಕೂಲವಾಗುವ ಮೂಲಭೂತ ಸೌಕರ್ಯಗಳಾದ ನೀರಿನ ವ್ಯವಸ್ಥೆ, ಬೆಳಕಿನ ವ್ಯವಸ್ಥೆ, ನೆರಳಿನ ವ್ಯವಸ್ಥೆ ಮತ್ತು ಸ್ವಚ್ಛತೆ ವ್ಯವಸ್ಥೆ ಹಾಗೂ ದಾಸೋಹ ವ್ಯವಸ್ಥೆ ಇವೇ ಮೊದಲಾದ ಮೂಲಭೂತ ಸೌಕರ್ಯಗಳಿಗೆ ವಿನಿಯೋಗ ಮಾಡಲಾಗಿರುತ್ತದೆ. |
| ಈ) | ಸದರಿ ದೇವಸ್ಥಾನದಲ್ಲಿ ತೆಂಗಿನ ಕಾಯಿ, ಪ್ರಸಾದ ವಿನಿಯೋಗ, ಲೈಟಿಂಗ್ ಸೇರಿದಂತೆ ಇನ್ನಿತರೆ ಅಂಗಡಿ ಮುಂಗಟ್ಟುಗಳಿಗೆ ಟೆಂಡರ್ ಕರೆಯಲಾಗಿದೆಯೇ? (ಸಂಪೂರ್ಣ ವಿವರವನ್ನು ನೀಡುವುದು) | ಸದರಿ ಶ್ರೀ ಅಂಬಾದೇವಿ ದೇವಾಲಯಕ್ಕೆ ತೆಂಗಿನ ಕಾಯಿ, ಅರ್ಧ ಹೋಳು, ವಿದ್ಯುತ್ ಗುತ್ತಿಗೆ, ಅಮ್ಯೂಜ್‌ಮೆಂಟ್, ಕೇಶ ಮುಂಡನೆ, ಲಾಡು, ಪ್ರಸಾದ, ದರ್ಶನ ಟಿಕೇಟ್, ಪ್ರತಿ ವರ್ಷ ಜಾತ್ರಾ ಅವಧಿಯಲ್ಲಿ ಮಾತ್ರ ನಿಯಮಾನುಸಾರ ಟೆಂಡರ್ ಕರೆದು ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.<br><br>2010-11ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಕರೆಯಲಾದ ಟೆಂಡರ್ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |

ಸಂಖ್ಯೆ: ಕಂಇ 12 ಮುಸಪು 2026

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

# ಅನುಬಂಧ
## ಶ್ರೀ ಅಂಬಾದೇವಿ ದೇವಸ್ಥಾನದ ಟೆಂಡರ್ ಮಾಹಿತಿಯ ವಿವರ.

| ವರ್ಷ | ತೆಂಗಿನ ಕಾಯಿ | ಅರ್ಧ ಹೋಳು | ಲಾಡು ಪ್ರಸಾದ | ಅಮ್ಯೂಜ -ಮೆಂಟ್ | ವಿದ್ಯುತ್ ಗುತ್ತಿಗೆ | ಕೇಶ ಮುಂಡನ | ದರ್ಶನ ಟಿಕೇಟ್ | ಜಾತ್ರಾ ಅಂಗಡಿ ಬಾಡಿಗೆ |
|---|---|---|---|---|---|---|---|---|
| 2010-11 | 65000 | 45000 | 200000 | - | - | 10000 | 769500 | 632490 |
| 2011-12 | 730000 | 50000 | 245000 | - | - | 11000 | 761605 | 324650 |
| 2012-13 | 1096000 | 54000 | 305000 | - | - | 90000 | 910000 | 356503 |
| 2013-14 | 12,01,500 | 33000 | 435000 | - | - | 50000 | 888700 | 397914 |
| 2014-15 | 1342225 | 31000 | 425000 | - | 2500 | 33000 | 794725 | 320776 |
| 2015-16 | 1621000 | 45000 | 205000 | 49000 | 2500 | 33000 | 1299000 | 381745 |
| 2016-17 | 1145000 | 117000 | 275000 | 114000 | 42000 | 31200 | 1481000 | 327745 |
| 2017-18 | 1245000 | 70100 | 680000 | 805000 | 59000 | 40000 | 1257100 | 360117 |
| 2018-19 | 1811000 | 75000 | 921000 | 155000 | 99000 | 85000 | 1818700 | 366918 |
| 2019-20 | 1955000 | 50000 | 200000 | 460000 | 55000 | - | - | 362404 |
| 2020-21 | 1818355 | 40000 | - | - | - | - | 108500 | 7651 |
| 2021-22 | 510000 | 55000 | - | - | - | 11000 | - | 71263 |
| 2022-23 | 1851000 | 100000 | 500000 | 511000 | 180000 | 14000 | 1928600 | 340612 |
| 2023-24 | 4942865 | 165000 | 1150000 | 851000 | 69000 | 9000 | 2801100 | 321511 |
| 2024-25 | 2755000 | 226000 | 450000 | 90000 | 235000 | - | 2875000 | 264937 |
| 2025-26 | 3840000 | 322000 | 900000 | 1011000 | 85000 | - | 2500000 | 1139200 |

ಆಯುಕ್ತರ ಪರವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು